ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 14.07.2023.**

**ಪಾಟೀ ಸವಾಲು - ವಾದಿಗಳ ವಾರಸುದಾರರ ಪರ ವಕೀಲರಿಂದಃ**

7) ನನಗೆ ಕನ್ನಡ ಓದಲು ಬರುವುದಿಲ್ಲ, ಇಂಗ್ಲೀಷ ಮಾತ್ರ ಗೊತ್ತು. ನಾನು ಇಲ್ಲಿ ವಾಸ ಮಾಡುತ್ತೇನೆ ಎಂದರೆ ನಂ.11 ತುಮಕೂರು ರಸ್ತೆ, ಬೆಂಗಳೂರು ವಿಳಾಸದಲ್ಲಿ ವಾಸ ಮಾಡುತ್ತೇನೆ. ಆ ವಿಳಾಸವು ನನ್ನ ಖಾಯಂ ವಿಳಾಸವೇ ಎಂದರೆ ಹೌದು. ನಾನು ರಾಜಸ್ಥಾನ ಮೂಲದ ವ್ಯಕ್ತಿ ಎಂದರೆ ಸರಿ. ನನಗೆ ರಾಜಸ್ಥಾನ ಮತ್ತು ಕರ್ನಾಟಕ ಎರಡೂ ಕಡೆಯಲ್ಲಿ ಆಸ್ತಿಗಳಿವೆ ಎಂದರೆ ಕರ್ನಾಟಕದಲ್ಲಿ ಮಾತ್ರ ಆಸ್ತಿಗಳು ಇರುತ್ತವೆ. ನಾನು Hamlet ಕಂಪನಿಯಲ್ಲಿ ಪಾಲುದಾರನಿರುತ್ತೇನೆ. ನಾನು Hamlet ಕಂಪನಿಯಲ್ಲಿ ಪಾಲುದಾರನೆಂಬ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ನಿಡಿ-15 ಏನು ದಾಖಲೆ ಎಂದರೆ ನನಗೆ ಗೊತ್ತಾಗುವುದಿಲ್ಲ, ನಮ್ಮ ವಕೀಲರನ್ನು ಕೇಳಿ ಹೇಳಬೇಕಾಗುತ್ತದೆ. ಈ ದಾವೆಯ ಆಸ್ತಿಗಳಲ್ಲಿ ನಾನು ಯಾವ ಯಾವ ಆಸ್ತಿಗಳನ್ನು ಖರೀದಿ ಮಾಡಿದ್ದೇನೆಂದು ಹೇಳಲು ಆಗುತ್ತದೆಯೇ? ಎಂದರೆ ಸರ್ವೆ ನಂ.45 ಅನ್ನು ಖರೀದಿ ಮಾಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಹೇಳಿದ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿದ್ದಾರೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸತ್ಯವಾಗಿಯೇ ಇರುತ್ತವೆ ಎಂದರೆ ಸರಿ. ನನ್ನ ಪೂರ್ತಿ ಹೆಸರು ಬಿಮಲ್ ಕುಮಾರ್ ಗೊಯಂಕಾ ಇರುತ್ತದೆ. ಬರೀ ಬಿಮಲ್ ಗೊಯಂಕಾ ಎಂದು ನನ್ನನ್ನು ಕರೆಯುವುದಿಲ್ಲ. ನಿಡಿ-23 ಮತ್ತು ನಿಡಿ-24 ಕ್ರಯಪತ್ರಗಳು ಮತ್ತು ನಿಡಿ-7 ಮತ್ತು ನಿಡಿ-8 ಪಹಣಿಗಳಲ್ಲಿ ನನ್ನ ಹೆಸರನ್ನು ಬರೀ ಬಿಮಲ್ ಗೊಯಂಕಾ ಎಂದು ನಮೂದು ಮಾಡಿದ್ದಾರೆ ಎಂದರೆ ಅದು ಬೆರಳಚ್ಚು ಮಾಡುವಾಗ ಆದ ತಪ್ಪು ಇರಬಹುದು. ಈ ದಾಖಲೆಗಳಲ್ಲಿ ಇರುವ ವ್ಯಕ್ತಿ ಮತ್ತು ನಾನು ಬೇರೆ ಬೇರೆ ವ್ಯಕ್ತಿಗಳು ಎಂದರೆ ಸರಿಯಲ್ಲ. ನಿಡಿ-18 ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮಾತ್ರ ನನ್ನ ಹೆಸರನ್ನು ಬಿಮಲ್ ಕುಮಾರ್ ಗೊಯಂಕಾ ನಮೂದಿಸಿದ್ದಾರೆ, ಉಳಿದ ಎಲ್ಲಾ ದಾಖಲೆಗಳಲ್ಲಿ ನನ್ನ ಹೆಸರನ್ನು ಬಿಮಲ್ ಗೊಯಂಕಾ ಎಂದು ನಮೂದು ಮಾಡಿದ್ದಾರೆ ಆದ್ದರಿಂದ ಈ ಇಬ್ಬರು ವ್ಯಕ್ತಿಗಳು ಬೇರೆ ಬೇರೆ ವ್ಯಕ್ತಿಗಳು ಎಂದರೆ ಅಲ್ಲ, ಆ ಎರಡು

ಹೆಸರಿನ ದಾಖಲೆಗಳು ನನ್ನವೇ ಇರುತ್ತವೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂ.1 ರಲ್ಲಿ ನಾನು 9 ನೇ ಪ್ರತಿವಾದಿ ಕಂಪನಿಯ ಪಾಲುದಾರನೆಂದು ಹೇಳಿದ್ದು, ಅದರ ರುಜುವಾತಿಗೆ ದಾಖಲೆ ಹಾಜರು ಮಾಡಿದ್ದೀನಾ? ಎಂದರೆ Partnership Deed ಹಾಜರು ಮಾಡಿದ್ದೇನೆ. ಸದರಿ ಕಂಪನಿಯಲ್ಲಿ 7 ಜನ ಪಾಲುದಾರರು ಇರುತ್ತಾರೆ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಿತು**)**.

**ಸಾಕ್ಷಿಯನ್ನು ಮಧ್ಯಾಹ್ನ 3.00 ಘಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿತು.**

8) ಐಟಂ ನಂ.1 ಮತ್ತು ಐಟಂ ನಂ.2 ಆಸ್ತಿಗಳನ್ನು ನಾವು ಯಾರ ಕಡೆಯಿಂದ ಖರೀದಿ ಮಾಡಿದ್ದೆವು ಎಂದರೆ ಕೊಂಡಪ್ಪ, ವೆಂಕಟೇಶ ಮತ್ತು ಇನ್ನೊಬ್ಬರ ಕಡೆಯಿಂದ ಖರೀದಿ ಮಾಡಿದ್ದೆವು. ನನ್ನಿಂದ ಸದರಿ ಆಸ್ತಿಗಳನ್ನು ಯಾವ ದಿನಾಂಕದಂದು ಖರೀದಿ ಮಾಡಿದ್ದೇನೆಂದು ಹೇಳಲು ಆಗುವುದಿಲ್ಲ. ಸರ್ವೆ ನಂ.45 ರ ಚೆಕ್ಕುಬಂದಿ ಪೂರ್ವ ಮತ್ತು ದಕ್ಷಿಣಕ್ಕೆಃ ನಮ್ಮ Hamlet ಕಂಪನಿಯ ಆಸ್ತಿ, ಪಶ್ಚಿಮ ಮತ್ತು ಉತ್ತರಕ್ಕೆಃ ಡಾ. ಶುಕ್ಲಾ ರವರ ಆಸ್ತಿ ಇರುತ್ತವೆ. ಸರ್ವೆ ನಂ.176/1 ರ ಚೆಕ್ಕುಬಂದಿ ಪೂರ್ವಕ್ಕೆಃ ಸರ್ವೆ ನಂ.176/2, ಪಶ್ಚಿಮಕ್ಕೆಃ ಮೀನುಕುಂಟೆ ಗ್ರಾಮ, ಉತ್ತರ ಮತ್ತು ದಕ್ಷಿಣದ ಚೆಕ್ಕುಬಂದಿ ಮರೆತಿದ್ದೇನೆ. ಖರೀದಿ ಮಾಡುವ ಮುಂಚೆ ಕೊಂಡಪ್ಪನವರ ವಂಶವೃಕ್ಷವನ್ನು ಪರಿಶೀಲನೆ ಮಾಡಿದ್ದೀರಾ? ಎಂದರೆ ನಮ್ಮ ವಕೀಲರು ಅದರ ಪರಿಶೀಲನೆಯನ್ನು ಮಾಡಿದ್ದರು. ಕೊಂಡಪ್ಪನಿಗೆ 5 ಜನ ಮಕ್ಕಳು ಇದ್ದು, ನಾನು ಅವರ ಪೈಕಿ ಅಕ್ಕಯ್ಯಮ್ಮ, ಗುಣ್ಣಮ್ಮ ಮತ್ತು ಮುನಿವೆಂಕಟಪ್ಪ ಇವರ ಕಡೆಯಿಂದ ಅಥವಾ ಇವರ ವಾರಸುದಾರರ ಕಡೆಯಿಂದ ಕ್ರಯಪತ್ರಕ್ಕೆ ಸಹಿ ಮಾಡಿಸದೇ ಇರುವ ಕಾರಣಕ್ಕೆ ಸದರಿ ವಾರಸುದಾರರಿಗೂ ದಾವಾ ಸ್ವತ್ತುಗಳಲ್ಲಿ ಹಿಸ್ಸೆಯ ಹಕ್ಕು ಇರುತ್ತದೆ ಎಂದರೆ ನಾನು ಖರೀದಿ ಮಾಡುವ ಕಾಲದಲ್ಲಿ ಕಾನೂನಿನ ಪ್ರಕಾರ ಹೆಣ್ಣು ಮಕ್ಕಳ ಹಕ್ಕನ್ನು

ಇನ್ನೂ ಗುರುತಿಸಿರಲಿಲ್ಲ. ನಾನು ಕೊಂಡಪ್ಪನ ಮಗ ಮುನಿವೆಂಕಟಪ್ಪನ ಕಡೆಯಿಂದಲೂ ಕ್ರಯಪತ್ರಕ್ಕೆ ಸಹಿ ಪಡೆದಿಲ್ಲ ಎಂದರೆ ಅವರ ಕುಟುಂಬದಲ್ಲಿ ಆಗಿದ್ದ ಪಾಲು ವಿಭಾಗದ ಪ್ರಕಾರ ಮುನಿವೆಂಕಟಪ್ಪ ನನ್ನ ಕ್ರಯಪತ್ರಗಳು ನೋಂದಣಿಯಾಗುವ ಮುಂಚೆಯೇ ಸರ್ವೆ ನಂ.176/1 ರಲ್ಲಿ ತನ್ನ ಪಾಲನ್ನು ಪಡೆದುಕೊಂಡಿದ್ದರಿಂದ ಆತನ ಕಡೆಯಿಂದ ಕ್ರಯಪತ್ರಕ್ಕೆ ಸಹಿ ಮಾಡಿಸಿಕೊಂಡಿಲ್ಲ. 9 ಮತ್ತು 10 ನೇ ವಾದಿಗಳಿಗೂ ದಾವಾ ಸ್ವತ್ತುಗಳಲ್ಲಿ ಸಮನಾದ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿಯಲ್ಲ. ಆದ್ದರಿಂದಲೇ ಅವರೂ ಕೂಡ ಪಾಲು ವಿಭಾಗ ಕೋರಿ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**